## ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ:

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 309 (ಬಿ) ರ ಅನ್ವಯ ಎಲ್ಲಾ ಗ್ರಾಮ ಪಂಚಾಯಿತಿಗಳು ಹೊಸದಾಗಿ ರಚನೆಯಾದ ತರುವಾಯ ಮುಂದಿನ 5 ವರ್ಷಗಳಿಗೆ ದೂರ ದೃಷ್ಟಿಯೋಜನೆಯನ್ನು ಸಿದ್ದ ಪಡಿಸಬೇಕಾಗಿದೆ. ಅದರ ಮುಖ್ಯಾಂಶಗಳು ಈ ಕೆಳಕಂಡಂತಿದೆ.

- ಗ್ರಾಮ ಪಂಚಾಯಿತಿಯ ಪೂರ್ಣಾವಧಿ ದೂರ ದೃಷ್ಟಿ ಯೋಜನೆಯನ್ನು ಕೇಂದ್ರೀಕೃತ ಗುಂಪು ಚರ್ಚೆ ಹಾಗೂ ಸಹಭಾಗಿ ಗ್ರಾಮೀಣ ಸಮೀಕ್ಷೆ (Public Rural Appraisal) ಮೂಲಕ ಗ್ರಾಮ ಪಂಚಾಯಿತಿಯ ರಚನೆಯ 3 ತಿಂಗಳೊಳಗೆ ತಯಾರಿಸಬೇಕಾಗಿದೆ.
- ಕಾರ್ಯ ನಿರ್ವಹಣೆಯ ಮೌಲ್ಯ ಮಾಪನಕ್ಕಾಗಿ ಗುರಿಗಳನ್ನು ನಿಗದಿಪಡಿಸುವುದು ಹಾಗೂ ಪರಿಣಾಮಗಳ ಸೂಚ್ಯಾಂಕಗಳನ್ನು ನಿಗದಿಪಡಿಸುವುದು.
- ಈ ಯೋಜನೆಯು ಮುಂದಿನ 5 ವರ್ಷಗಳಿಗೆ ಅಗತ್ಯ-ಆಧಾರಿತ ವಾರ್ಷಿಕ ಯೋಜನೆಗಳಿಗೆ ಆಧಾರವಾಗಿರುತ್ತದೆ.

ರಾಜ್ಯವು 2022-23 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿ ದೂರ ದೃಷ್ಟಿ ಯೋಜನೆಯ ಸಿದ್ಧತೆಗೆ ಪ್ರಕ್ರಿಯೆಯನ್ನು ವಿಶ್ಲೇಷಣೆ ಮೂಲಕ ಅಂತಿಮಗೊಳಿಸುವುದು. ಯೋಜನೆಗಳ ತಯಾರಿಕೆಯಲ್ಲಿ ಈ ಕೆಳಕಂಡ ಮಾನದಂಡಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ತೀರ್ಮಾನಿಸಲಾಯಿತು.

ಸ್ಥಳೀಯ ಸಮಸ್ಯೆಗಳು ಹಾಗೂ ಸ್ಥಳೀಕರಣಗೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳ ಆಧಾರದ ಮೇಲೆ ಯೋಜನೆಗಳನ್ನು ವಿಷಯ ತಜ್ಞರ ಸಮಿತಿಯು ನಿಗದಿಪಡಿಸಿದ ಸೂಚ್ಯಾಂಕಗಳ ಆಧಾರದ ಮೇಲೆ ಯೋಜನೆಗಳನ್ನು ಸಿದ್ಧಪಡಿಸಲು ಪ್ರಮುಖ ನಿರ್ಧಾರವಾಗಿದೆ. ಗ್ರಾಮ ಪಂಚಾಯಿತಿಯ ಅಭಿವೃದ್ಧಿಯು ದೂರ ದೃಷ್ಟಿ ಯೋಜನೆಯ ಅಂಗವಾಗಿ ಪರಿಗಣಿಸಲಾಗಿದೆ. ಇನ್ನುಳಿದಂತೆ ಮುಖ್ಯವಾದ ಉಪಕ್ರಮಗಳು ಈ ಕೆಳಕಂಡಂತಿದೆ.

- ಎಲ್ಲಾ ಯೋಜನೆಗಳು ಗ್ರಾಮ ಪಂಚಾಯಿತಿ ದೂರ ದೃಷ್ಟಿ ಯೋಜನೆಯ ಆಧಾರದ ಮೇಲೆ ಇರತಕ್ಕದ್ದು.
- ಸವಿವಿವರವಾದ ಯೋಜನೆಗಾಗಿ ರಾಜ್ಯದಲ್ಲಿ 8 ವಲಯಗಳನ್ನು ಗುರುತಿಸಲಾಗಿದೆ.
- ಪ್ರತಿಯೊಂದು ವಲಯದಲ್ಲಿ, ಗ್ರಾಮಗಳಲ್ಲಿ ಇರುವಂತಹ ಸಮಸ್ಯೆಗಳನ್ನು ಗುರುತಿಸುವ ನಮೂನೆ/ ಪ್ರಪತ್ರದಲ್ಲಿ ಇರತಕ್ಕದ್ದು ಹಾಗೂ ಮುಂದಿನ 5 ವರ್ಷಗಳಿಗೆ ಗುರಿಗಳನ್ನು ನಿಗದಿಪಡಿಸುವುದು.
- ಪೈಲೆಟ್‌ಗಳು ಆಯ್ಕೆಯಾದ ಗ್ರಾಮ ಪಂಚಾಯಿತಿಗಳಲ್ಲಿ ಪ್ರಕ್ರಿಯೆ ಹಾಗೂ ನಿಗದಿಪಡಿಸಿದ ನಮೂನೆ/ ಪ್ರಪತ್ರವನ್ನು ಪರಿವೀಕ್ಷಿಸುವುದು.
- ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಸುಸಜ್ಜಿತ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ ಇರತಕ್ಕದ್ದು.
- ಪ್ರಕ್ರಿಯೆಯ ಪ್ರಮುಖ ಅಂಶಗಳಲ್ಲಿ ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಯೋಜನಾ ಸಮಿತಿಗಳ ರಚನೆ ಮತ್ತು ಸದರಿ ಸಮಿತಿಗಳ ಸದಸ್ಯರ ವಿವರಗಳು ಈ ಕೆಳಕಂಡಂತಿದೆ:
  - ಗ್ರಾಮ ಪಂಚಾಯಿತಿಯ ಅಧ್ಯಕ್ಷರು – ಅಧ್ಯಕ್ಷರು
  - ಉಪಾಧ್ಯಕ್ಷರು ಹಾಗೂ ಎಲ್ಲಾ ಚುನಾಯಿತ ಸದಸ್ಯರು
  - ಗ್ರಾಮ ಪಂಚಾಯಿತಿ ಹಂತದ ಎಲ್ಲಾ ಕ್ಷೇತ್ರ ಇಲಾಖೆಗಳ ಅಧಿಕಾರಿಗಳು.
  - ಜಿ.ಪಿ.ಎಲ್.ಎಫ್. ಪ್ರತಿನಿಧಿಗಳು.
  - ಗ್ರಾಮದಲ್ಲಿ ವಾಸಿಸುವ ನಿವೃತ್ತ ಅಧಿಕಾರಿ/ ನೌಕರರು.

- ಪಂಚಾಯಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು.
- ಯುವಕ ಹಾಗೂ ಯುವತಿಯರ ಮಂಡಳಿ ಸದಸ್ಯರು.
- ಗ್ರಾಮದಲ್ಲಿರುವ ವಲಯ ವಿಷಯ ತಜ್ಞರು.
- ಪಂಚಾಯತ್ ಅಭಿವೃದ್ಧಿ ಅಧಿಕಾರಿ – ಸದಸ್ಯ ಕಾರ್ಯದರ್ಶಿ.

ಗ್ರಾಮ ಯೋಜನಾ ಸಮಿತಿಯು ಮೇಲ್ಕಂಡ ಸಮಿತಿಯ ಅನುರೂಪವಾಗಿದ್ದು, ಸದರಿ ಸಮಿತಿಗೆ ವಾರ್ಡ್ ಸದಸ್ಯರು ಮುಖ್ಯಸ್ಥರಾಗಿರುತ್ತಾರೆ ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**ಗ್ರಾಮ ಪಂಚಾಯಿತಿ ದೂರ ದೃಷ್ಟಿ ಯೋಜನೆಯ ವಲಯಗಳು:**

- ಬಡತನರಹಿತ, ಜೀವನೋಪಾಯ ಹಾಗೂ ಕೌಶಲ್ಯಾಭಿವೃದ್ಧಿ.
- ಆರೋಗ್ಯ
- ಶಿಕ್ಷಣ
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
- ಪರಿಸರ ಮತ್ತು ಪ್ರಾಕೃತಿಕ ಸಂಪನ್ಮೂಲಗಳು
- ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕವಾಗಿ ಸಧೃಡ ಪಂಚಾಯಿತಿ
- ಸ್ವಾವಲಂಬಿ ಮೂಲ ಸೌಕರ್ಯದ ಪಂಚಾಯಿತಿ
- ಒಳ್ಳೆ ಆಡಳಿತ

**ದೂರ ದೃಷ್ಟಿ ಸಿದ್ಧಪಡಿಸುವ ಹಂತಗಳು:**

ಹಂತ-1: ಗ್ರಾಮ ಯೋಜನಾ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಯೋಜನಾ ಸಮಿತಿ ರಚನೆ.

ಹಂತ-2: ದ್ವಿತೀಯ ದಂತಾಂಶ ಸಂಗ್ರಹಣೆ.

ಹಂತ-3: ಕೇಂದ್ರೀಕೃತ ಗುಂಪು ಚರ್ಚೆ ಮತ್ತು ಸಹಭಾಗಿ ಗ್ರಾಮೀಣ ಸಮೀಕ್ಷೆ.

ಹಂತ-4: ಜನವಸತಿ ಮತ್ತು ವಾರ್ಡ್ ಸಭೆಗಳ ಆಯೋಜನೆ.

ಹಂತ-5: ವಾಸ್ತವ ಸ್ಥಿತಿಯ ವಿಶ್ಲೇಷಣೆ ಮೂಲಕ ಕರಡು ದೂರ ದೃಷ್ಟಿ ಯೋಜನೆ ತಯಾರಿಕೆ.

ಹಂತ-6: ಗ್ರಾಮ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆ.

ಹಂತ-7: ಗ್ರಾಮ ಪಂಚಾಯಿತಿ ಸಭೆ.

ಹಂತ-8: ಗ್ರಾಮ ಸಭಾ ಸಭೆಗಳ ಆಯೋಜನೆ ಮತ್ತು ಯೋಜನೆಗೆ ಅನುಮೋದನೆ.

ಹಂತ-9: ಗ್ರಾಮ ಸಭೆ ಮಾಡಿದ ಶಿಫಾರಸ್ಸುಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಸಂಗ್ರಹ.

ಹಂತ-10: ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸುವುದು.

ಗ್ರಾಮ ಪಂಚಾಯಿತಿಗಳಿಗೆ ಸಹಾಯ ಹಸ್ತ ನೀಡಲು ಸರ್ಕಾರದಿಂದ ಮೇಲುಸ್ತುವಾರಿಯ ವ್ಯವಸ್ಥೆಯನ್ನು ರೂಪಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ:

- ಆಯುಕ್ತರು ಗ್ರಾಮೀಣಾಭಿವೃದ್ಧಿ, ಆಯುಕ್ತರು ಪಂಚಾಯತ್ ರಾಜ್, ನಿರ್ದೇಶಕರು ಇ-ಆಡಳಿತ ಹಾಗೂ ನಿರ್ದೇಶಕರು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ (ANSSIRD) – ಇವರುಗಳು ರಾಜ್ಯ ಮಟ್ಟದ ನೋಡಲ್ ಅಧಿಕಾರಿಗಳಾಗಿರುತ್ತಾರೆ.
- 3-4 ಜಿಲ್ಲೆಗಳಿಗೆ ರಾಜ್ಯ ಮಟ್ಟದ ನಿರ್ದೇಶಕರು ದರ್ಜೆಯ ನೋಡಲ್ ಅಧಿಕಾರಿಗಳು.
- ಜಿಲ್ಲಾ ಪಂಚಾಯತ್‌ಗಳಲ್ಲಿ ಉಪ ಕಾರ್ಯದರ್ಶಿ ಹಾಗೂ ಮುಖ್ಯ ಯೋಜನಾ ಅಧಿಕಾರಿ ಇವರುಗಳ ಸಹಯೋಗದೊಂದಿಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
- ಪ್ರತಿ ತಾಲ್ಲೂಕಿಗೆ ಒಂದು ಜಿಲ್ಲಾ ಮಟ್ಟದ ಅಧಿಕಾರಿ.
- 5 ಗ್ರಾಮ ಪಂಚಾಯಿತಿಗಳಿಗೆ ಒಂದು ತಾಲ್ಲೂಕು ಮಟ್ಟದ ಅಧಿಕಾರಿ.
- ಪ್ರತಿಯೊಂದು ಜಿಲ್ಲೆಗೆ ಬೆಂಬಲವಾಗಿ ಒಂದು ಶಿಕ್ಷಣ ಸಂಸ್ಥೆ.

ಸರ್ಕಾರವು, ಜನ ಸಮೂಹಕ್ಕೆ ಸಂಪರ್ಕ ಕಲ್ಪಿಸಲು ಕ್ರಮಗಳನ್ನು ಕೈಗೊಳ್ಳುವುದಲ್ಲದೆ ಗ್ರಾಮ ಪಂಚಾಯಿತಿಗಳಿಗೆ ಸಹಾಯವನ್ನು ಈ ಕೆಳಕಂಡಂತೆ ನೀಡುತ್ತಿದೆ.

- ಪ್ರಾಯೋಗಿಕವಾಗಿ 31 ಪೈಲಟ್‌ಗಳನ್ನು ಜಿಲ್ಲೆಯೊಂದಕ್ಕೆ ಒಂದು ಗ್ರಾಮ ಪಂಚಾಯಿತಿಯ್ನು ಆಯ್ಕೆ ಮಾಡಲಾಗಿದ್ದು, ಅದರ ಪ್ರತಿಕ್ರಿಯೆಯನ್ನು ಪಡೆಯಲಾಗಿದೆ.
- ದೂರ ದೃಷ್ಟಿ ಯೋಜನೆಯನ್ನು ವಿವಿಧ ಭಾಷೆಗಳಾದ ಹಿಂದಿ, ಉರ್ದು, ತುಳು, ಮರಾಠಿ, ಸೋಲಿಗ ಭಾಷೆ, ಕೊರಗ ಭಾಷೆ ಹಾಗೂ ಸನ್ನೆ ಭಾಷೆ ಮೂಲಕ ಜನ ಸಮೂಹಕ್ಕೆ IEC ಮಾಧ್ಯಮಗಳ ಮುಖಾಂತರ ಪ್ರಚಾರ.
- ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ PRA ಹಾಗೂ FGD ಚಟುವಟಿಕೆಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಸಹಾಯಕ್ಕೆ ಒಬ್ಬ ತರಬೇತಿ ಹೊಂದಿರುವ ಮಾನವ ಸಂಪನ್ಮೂಲ ವ್ಯಕ್ತಿಯನ್ನು ಒದಗಿಸಲಾಗಿದೆ.